2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 145/2019</u>

| | | |
|---|---|---|
| ಸಾಕ್ಷಿದಾರರ ಹೆಸರು | - ಸಹನ ಚೌಹಾಣ್ ಸಿ.ಎಸ್. | ಪಿಡಬ್ಲೂ - 24 |
| ಗಂಡನ ಹೆಸರು | - ಡಾ. ರಾಮಕೃಷ್ಣ ರಾವ್ | ಸಿಡಬ್ಲೂ - 48 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಹಿರಿಯ ವೈಜ್ಞಾನಿಕ ಅಧಿಕಾರಿ, ಡಿ.ಎನ್.ಎ. ವಿಭಾಗ, ಎಫ್.ಎಸ್.ಎಲ್. ಬೆಂಗಳೂರು | |
| ವಾಸ ಸ್ಥಳ | - ಬೆಂಗಳೂರು | |

ಸಾಕ್ಷಿಯ ವಿಚಾರಣೆ ವಿಸಿ ಮೂಲಕ

ದಿನಾಂಕಃ **10.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಡಿಸೆಂಬರ್ 2019 ರಿಂದ ಇಲ್ಲಿಯವರೆಗೆ ಬೆಂಗಳೂರು ಎಫ್.ಎಸ್.ಎಲ್. ಇಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಕೋರ್ಡಿನೇಟರಾಗಿ ಶ್ರೀ.ಬ್ರಿಜೇಶ್ ಪಾಟೀಲ್ ಬಿನ್ ಫಕೀರಪ್ಪ, 33 ವರ್ಷ, ಸೈಂಟಿಫಿಕ್ ಆಫೀಸರ್, ಡಿ.ಎನ್.ಎ. ವಿಭಾಗ, ಎಫ್.ಎಸ್.ಎಲ್., ಬೆಂಗಳೂರು ಇವರು ಹಾಜರಿರುತ್ತಾರೆ.

3. ದಿಃ 03.09.2019 ರಂದು ಮಲ್ಲಂದೂರು ಪೋಲೀಸ್ ಠಾಣೆಯ ಈ ಪ್ರಕರಣದಲ್ಲಿ ಒಂದು ಸೀಲಾದ ಸ್ವತ್ತುವನ್ನು ಪಿ.ಸುಬ್ರಮಣಿ ಎನ್ನುವವರ ಮೂಲಕ ಕಳುಹಿಸಲಾಗಿದ್ದು ನಮ್ಮ ಕಚೇರಿಯಲ್ಲಿ ಸ್ವೀಕೃತವಾಗಿತ್ತು. ಅದೇ ದಿನ ನಾನು ಸದರಿ ಸೀಲಾದ ವಸ್ತುವನ್ನು ಪರೀಕ್ಷೆಗಾಗಿ ಪಡೆದಿದ್ದೇನೆ. ಸದರಿ ಸೀಲಾದ ಸ್ವತ್ತಿಗೆ ಅಳವಡಿಸಿದ ಸೀಲು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿತ್ತು. ಸೀಲು ಸುಸ್ಥಿತಿಯಲ್ಲಿತ್ತು. ವಸ್ತು ಸಂಖ್ಯೆ.1 ರಲ್ಲಿನ ಎಲುಬು ಮೃತ ಮಗುವಿಗೆ ಸಂಬಂಧಿಸಿದ್ದು.

4. ನಂತರ ದಿಃ 02.08.2021 ರಂದು ಇದೇ ಪ್ರಕರಣದಕ್ಕೆ ಸಂಬಂಧಿಸಿದ ಒಂದು ವಸ್ತುವನ್ನು ಕರಿಯಪ್ಪ, ಮಲ್ಲಂದೂರು ಠಾಣಾ ಪಿಸಿ ನಮ್ಮ ಕಚೇರಿಗೆ ಸಲ್ಲಿಸಿದ್ದು ನಾನು ಅದೇ ದಿನ ಪರೀಕ್ಷೆಗಾಗಿ ಪಡೆದಿರುತ್ತೇನೆ. ಸೀಲಾದ ಸ್ವತ್ತಿಗೆ ಅಳವಡಿಸಿದ ಸೀಲು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿತ್ತು. ಸೀಲು ಸುಸ್ಥಿತಿಯಲ್ಲಿತ್ತು. ವಸ್ತು ಸಂಖ್ಯೆ.2 ರಲ್ಲಿ ಲಿಂಗರಾಜು ಈತನ ರಕ್ತದ ಮಾದರಿ ಇರುವ ಒಂದು ಇಡಿಟಿಎ ವ್ಯಾಕ್ಯುಟೇನರ್ ಇತ್ತು.

5. ಮೇಲೆ ಹೇಳಿದ ಎರಡು ವಸ್ತುಗಳನ್ನು ಪರೀಕ್ಷೆಗೆ ಒಳಪಡಸಿದ್ದೇನೆ. ಮೇಲೆ ಹೇಳಿದ ರೈಟ್ ಫ್ಯುಮರ್ ಬೋನ್ H5789 ಡಿಎನ್.ಎ ಕೋಡ್ ನೀಡಲಾಗಿದ್ದು, ಮೇಲೆ ಹೇಳಿದ ಮಾದರಿ ರಕ್ತಕ್ಕೆ H5734 ಡಿಎನ್.ಎ ಕೋಡ್ ನೀಡಲಾಯಿತು.

6. ಮೇಲೆಹೇಳಿದಂತೆ ಕೋಡಾದ ವಸ್ತುಗಳಿಂದ ಡಿಎನ್ ಎ ಬೇರ್ಪಡಿಸಿ ಪ್ರೋಪೈಲಿಂಗ್‌ಗೆ ಒಳಪಡಿಸಿರುತ್ತೇನೆ. ನಾನು ಅಳವಡಿಸಿದ ವಿಧಾನ ವನ್ನು ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. ದೊರೆತಂತಹ ಫಲಿತಾಂಶದ ಆಧಾರದ ಮೇಲೆ ನನ್ನ ಅಭಿಪ್ರಾಯ ಈ ಕೆಳಕಂಡತಿರುತ್ತದೆ.

1. ವಸ್ತು ಸಂಖ್ಯೆ.1 ರನ್ವಯ ಕಳುಹಿಸಿದ ರೈಟ್ ಫ್ಯೂಮರ್ ಬೋನ್ ಮಾನವ ಮೂಲದ ಹೆಣ್ಣು ಮಗುವಿನದ್ದಾಗಿರುತ್ತದೆ.

2. ವಸ್ತು ಸಂಖ್ಯೆ.1 ರನ್ವಯ ಕಳುಹಿಸಿದ ರೈಟ್ ಫ್ಯೂಮರ್ ಬೋನಿನ ಡಿ.ಎನ್.ಎ. ಪ್ರೋಪೈಲ್ ವಸ್ತು ಸಂಖ್ಯೆ.2 ರಲ್ಲಿ ಕಳುಹಿಸಿದ ರಕ್ತದ ಮಾದರಿಯ ಡಿ.ಎನ್.ಎ. ಪ್ರೋಪೈಲ್ ಗೆ ತಾಳೆಯಾಗುತ್ತಿತ್ತು.

ಆದ್ದರಿಂದ ವಸ್ತು ಸಂಖ್ಯೆ.2 ರಲ್ಲಿ ಕಳುಹಿಸಿದ್ದ ರಕ್ತದ ಮಾದರಿಯ ಲಿಂಗರಾಜು ಇವರು ವಸ್ತು ಸಂಖ್ಯೆ.1 ರಲ್ಲಿ

ಕಳುಹಿಸಿದ್ದ ರೈಟ್ ಫ್ಯೂಮರ್ ಬೋನ್ ಮಗುವಿನ ಜೈವಿಕ ತಂದೆ ಎಂದು ನನ್ನ ಅಭಿಪ್ರಾಯ ನೀಡಿರುತ್ತೇನೆ. ನನ್ನ ವರದಿಯ ಜೊತೆ ಅನುಬಂಧ-1, ಐಡೆಂಟಿಫಿಕೇಶನ್ ಫಾರಂ ಮತ್ತು ಫಾರ್ವಂರ್ಡಿಂಗ್ ನೋಟು, ಸ್ಯಾಂಪಲ್ ಸೀಲು ಕಳುಹಿಸಿದ್ದೇನೆ.

7. ನನ್ನ ವರದಿಯನ್ನು ನಿಪಿ.87 ಎಂದು ಸಾಕ್ಷಿಯ ಸಹಿಯನ್ನು ನಿಪಿ.87(ಎ) ಎಂದು ಗುರುತಿಸಲಾಯಿತು. ಅನುಬಂಧ-1 ನ್ನು ನಿಪಿ.88 ಎಂದು ಸಾಕ್ಷಿಯ ಸಹಿಯನ್ನು ನಿಪಿ.88(ಎ) ಎಂದು ಗುರುತಿಸಲಾಯಿತು. ಐಡೆಂಟಿಫಿಕೇಶನ್ ಫಾರಂ ನ್ನು ನಿಪಿ.89 ಎಂದು ಸಾಕ್ಷಿಯ ಸಹಿಯನ್ನು ನಿಪಿ.89(ಎ) ಎಂದುಗುರುತಿಸಲಾಯಿತು. ಸ್ಯಾಂಪಲ್ ಸೀಲನ್ನು ನಿಪಿ.90 ಎಂದು ಸಾಕ್ಷಿಯ ಸಹಿಯನ್ನು ನಿಪಿ.90(ಎ) ಎಂದು ಗುರುತಿಸಲಾಯಿತು.

8. ವಸ್ತು ಸಂಖ್ಯೆ.2 ರಕ್ತದ ಮಾದರಿಯನ್ನು ಪರೀಕ್ಷೆಗಾಗಿ ಸಂಪೂರ್ಣವಾಗಿ ಬಳಸಲಾಗಿದೆ. ವಸ್ತು ಸಂಖ್ಯೆ.1 ನ್ನು ತನಿಖಾಧಿಕಾರಿಗೆ ಹಿಂತಿರುಗಿಸಿದ್ದೇನೆ.

<u>ಪಾಟೀ ಸವಾಲುಃ ಶ್ರೀ.ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿತರ ಪರವಾಗಿ</u>

9. 2015 ರಿಂದ 2019 ರವರೆಗೆ ಮತ್ತು 2019 ರಿಂದ ಇಲ್ಲಿಯವರಗೆ ಕೆಲಸ ಮಾಡುತ್ತಿರುವ ಬಗ್ಗೆ ನಿಪಿ.87 ರ ವರದಿಯಲ್ಲಿ ನಮೂದಿಸಿಲ್ಲ. ವಸ್ತು ಸಂಖ್ಯೆ.1 ಮತ್ತು 2 ನ್ನು ನಮ್ಮ ಕಚೇರಿಯ ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿದ್ದಾರೆ. ವಸ್ತು ಸಂಖ್ಯೆ.1 ಮತ್ತು 2 ನ್ನು ನಮ್ಮ ಕಚೇರಿಯ ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿದಾಗ ಕಚೇರಿಯ ಸ್ವೀಕೃತಿ ವಿಭಾಗದಲ್ಲಿ ಯಾರು ಕೆಲಸ ಮಾಡುತ್ತಿದ್ದರು ಎಂದು ಹೇಳಲಾಗುವುದಿಲ್ಲ. ಮೊದಲು ಬಂದ ವಸ್ತುವಿಗೆ ಮೊದಲ

ಡಿಎನ್.ಎ ನಂಬರು ನಂತರ ಬಂದ ವಸ್ತುವಿಗೆ ನಂತರ ಡಿ.ಎನ್.ಎ. ನಂಬರನ್ನು ನೀಡಲಾಗುತ್ತದೆ.

10. ವಸ್ತು ಸಂಖೆ.1 ರ ಜೊತೆ ವಸ್ತು ಸಂಖ್ಯೆ.2 ರಲ್ಲಿ ವ್ಯಕ್ತಿಯ ಕೂಡದಲು ಬಂದರೂ ಸಹ ಪರೀಕ್ಷೆಗೆ ಒಳಪಡಿಸಿ ವರದಿ ನೀಡಬಹುದಾಗಿದೆ. ಡಿ.ಎನ್.ಎ. ಪರೀಕ್ಷೆ ಒಂದು ಡೆವಲಪಿಂಗ್ ವಿಷಯವಾಗಿದೆ.

11. ವಸ್ತು ಸಂಖ್ಯೆ.1 ರೈಟ್ ಫ್ಯೂಮರ್ ಬೋನ್ ವಸ್ತು ಸಂಖ್ಯೆ.2 ರಕ್ತದ ಮಾದರಿಯ ಡಿ.ಎನ್.ಎ. ಜೊತೆ ತಾಳೆಯಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ವಸ್ತು ಸಂಖ್ಯೆ.1 ರ ಜೊತೆ ಮೃತ ಮಗುವಿನ ಐಡೆಂಟಿಫಿಕೇಶನ್ ಫಾರಂ ನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸಾಮಾನ್ಯವಾಗಿ ಮೃತ ವ್ಯಕ್ತಿಯ ಐಡೆಂಟಿಫಿಕೇಶನ್ ಫಾರಂ ನ್ನು ಸಲ್ಲಿಸುವುದಿಲ್ಲ ಎನ್ನುತ್ತಾರೆ.

13. ನಿಪಿ.87 ಒಂದು ಸುಳ್ಳು ವರದಿ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ